## ಕಾನನದ ಮಧ್ಯ ಜಲಧಾರೆ



ಹೊಸನಗರ ತಾಲ್ಲೂಕಿನ ಪ್ರಸಿದ್ಧ ಜೈನ ಕ್ಷೇತ್ರ ಹೊಂಬಜ (ಹುಂಚ) ಸಮೀಪದ ಬಿಲ್ಲೇಶ್ವರದ ಸಿದ್ಧರ ಗುಡ್ಡ ಪಂಚನದಿಗಳ ಹುಟ್ಟಿನ ತವರು. ಮುಖ್ಯ ರಸ್ತೆಯ ಸಮೀಪದಲ್ಲೇ ಕುಮುದ್ವತಿ ಸೇರಿದಂತೆ 3 ನದಿಗಳು ಹುಟ್ಟುತ್ತವೆ. ಕುಶಾವತಿ ಕಾಡಿನ ಮಧ್ಯ ಹುಟ್ಟುತ್ತದೆ. ಬಾಲ್ಯದಲ್ಲಿ ನೋಡಿದ ಈ ನದಿಯನ್ನು ಇತ್ತೀಚೆಗೆ ಹುಡುಕಿ ಹೊರಟಾಗ, ಅಪೂರ್ವ ಅನುಭವ ಆಯಿತು. ದಟ್ಟ ಕಾನನದ ನಡುವೆ ನಿರಂತರವಾಗಿ ಹರಿಯುವ ಜಲಧಾರೆ, ಸುಡು ಬೇಸಿಗೆಯಲ್ಲಿಯೂ ಅಲ್ಲಿನ ತಂಪಾದ ವಾತಾವರಣ ಮನಸ್ಸಿಗೆ ಮುದ ನೀಡಿತು. ಅಲ್ಲೇ ಪಾಳುಬಿದ್ದ ದೇವಾಲಯದ ಅವಶೇಷಗಳು, ಈ ಪ್ರದೇಶ ಹಿಂದೆ ವೈಭವದಿಂದ ಮೆರೆದಿದ್ದರ ಸಂಕೇತ ಇರಬಹುದು.

—ಬಿಲ್ಲೇಶ್ವರ ಅಚ್ಚು, ಹುಂಚ



## ದ್ವೀಪದಲ್ಲಿ ರಾಫ್ಟಿಂಗ್

ದೇವರ ನಾಡು ಎಂಬ ಹೆಗ್ಗಳಿಕೆಯ ಕೇರಳದ ಒಂದು ಸುಂದರ ತಾಣ ವೈನಾಡು. ಪ್ರಾಕೃತಿಕ ಸೌಂದರ್ಯಕ್ಕೆ ಹೆಸರಾದ ಪ್ರಸಿದ್ಧ ಪ್ರವಾಸಿ ತಾಣ. ವೈನಾಡಿನಲ್ಲಿ ನೋಡತಕ್ಕ ಅನೇಕ ಸ್ಥಳಗಳಿದ್ದು ಅವುಗಳಲ್ಲಿ ಕುರುವದ್ವೀಪವೂ ಒಂದು. ಮನಂತವಾಡಿಯಲ್ಲಿರುವ ಈ ಸುಂದರ ತಾಣ, ನಮ್ಮ ಕರ್ನಾಟಕದ ನಾಗರಹೊಳೆಗೆ ಬಹಳ ಹತ್ತಿರದಲ್ಲಿದೆ. ಕಬಿನಿ ನದಿಯ ಸುಮಾರು 950 ಎಕರೆಗಳಷ್ಟು ವಿಸ್ತಾರ ಪ್ರದೇಶದ ದ್ವೀಪಸಮೂಹವೇ ಕುರುವದ್ವೀಪ. ಜನವಸತಿಯಿಂದ ಮುಕ್ತವಾಗಿರುವ ಈ ದ್ವೀಪ ಸಮೂಹದಲ್ಲಿ ರಮಣೀಯವಾದ ಹಸಿರು ಕಾಡುಗಳ ಸೌಂದರ್ಯ ನಳನಳಿಸುತ್ತಿದೆ. ಇಲ್ಲಿನ ಅಪರೂಪದ ಗಿಡಮರಗಳ ನಡುವೆ ಅನೇಕ ಪ್ರಾಣಿ ಪಕ್ಷಿಗಳು ನೆಲೆಸಿವೆ. ಇಲ್ಲಿ ನಮಗೆ ಬ್ಯಾಂಬೂ ರಿವರ್ ರಾಫ್ಟಿಂಗ್, ಅಂದರೆ ಬೊಂಬಿನ ರಾಫ್ಟಿಂಗ್ ಅಂದರೆ ಬೊಂಬಿನಿಂದ ಮಾಡಿದ ತೆಪ್ಪದ ಮೇಲೆ ಕುಳಿತು ನೀರಿನಲ್ಲಿ ವಿಹರಿಸುವುದು. ನದಿಯಲ್ಲಿ ಹೀಗೆ ಬೊಂಬಿನ ತೆಪ್ಪದಲ್ಲಿ ಕುಳಿತು ವಿಹರಿಸುತ್ತಾ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಸವಿಯುವುದು ಆನಂದದಾಯಕ.

—ಬಿ.ಆರ್.ಸುಹಾಸ್, ಬೆಂಗಳೂರು

## ದೇವರ ರುಜು

ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುವಾಗ ರಾಷ್ಟ್ರಕವಿ ಕುವೆಂಪು ಅವರ 'ದೇವರು ರುಜು ಮಾಡಿದನು' ಎಂಬ ಪದ್ಯ ಓದಿದ್ದೆ. ನೀಲ ಆಗಸದಲ್ಲಿ ಸಾಲಾಗಿ ಹಾರುವ ಹಕ್ಕಿಗಳ ಗುಂಪು ಕವಿಯ ಕಣ್ಣಲ್ಲಿ ದೇವರ ಸಹಿಯಂತೆ ಕಂಡಿರುವುದು ಒಂದು ಅದ್ಭುತ ಕಲ್ಪನೆ!

ಹಕ್ಕಿಗಳು ಕಾಲಿನಲ್ಲಿ ಸಹಿ ಮಾಡಲು ಬರುವಂತಿದ್ದರೆ ಎಷ್ಟು ಚಂದವಿತ್ತು ಎಂದು ನಾವು ಯೋಚಿಸುತ್ತಿದ್ದೆವು. ಆದರೆ ನನ್ನ ಬಾಳಿನಲ್ಲೂ ಹಕ್ಕಿಯೊಂದು ಸಹಿ ಮಾಡಿದ ಘಟನೆ ಈಚೆಗೆ ನಡೆಯಿತು. ಹಣ್ಣಿನ ತೋಟದಲ್ಲಿ ಹಾಕುವ ಬಲೆಗೆ ದೊಡ್ಡ ಹಕ್ಕಿಯೊಂದು ಬಿದ್ದು ಒದ್ದಾಡುತ್ತಿದೆಯೆಂದು ಗೆಳೆಯ ಕರೆ ಮಾಡಿ ತಿಳಿಸಿದ. ತೋಟದೊಳಕ್ಕೆ ಹೋಗಿ ನೋಡಿದರೆ ಬಲೆಯಲ್ಲಿ ತಲೆಕೆಳಗಾಗಿ ನೇತಾಡುತ್ತಿದ್ದ ಶಿಕ್ರಾ ಪಕ್ಷಿ ಕಾಣಿಸಿತು. ಈ ಹಕ್ಕಿ ಕಾಲುಗಳಲ್ಲಿ ಚೂಪಾದ ಉಗುರುಗಳನ್ನು ಹೊಂದಿರುತ್ತವೆ. ಬೇಟೆಯನ್ನು ಹಿಡಿಯಲು ಶತ್ರುಗಳ ಮೇಲೆ ಪ್ರತಿದಾಳಿ ನಡೆಸಲು ಈ ಉಗುರುಗಳನ್ನು ಆಯುಧವಾಗಿ ಬಳಸುತ್ತದೆ. ಇಂತಹ ಜಗಳಗಂಟ ಪಕ್ಷಿಯನ್ನು ಟವೆಲ್ ನಿಂದ ಮುಚ್ಚಿ ಜಾಗರೂಕವಾಗಿ ಬಲೆಯಿಂದ ಬಿಡಿಸಿ ಹೊರಗೆ ತಂದೆವು. ಇನ್ನೇನು ಹಾರಿಬಿಡಬೇಕು ಎನ್ನುವಷ್ಟರಲ್ಲಿ ಸಹನೆ ಕಳೆದುಕೊಂಡ ಹಕ್ಕಿ ತನ್ನ ಉಗುರುಗಳಿಂದ ನನ್ನ ಬೆರಳನ್ನು ಅದುಮಿ, ರೆಕ್ಕೆ ಬೀಸಿತು. ಕ್ಷಣಮಾತ್ರದಲ್ಲಿ ಬೆರಳಿನ ಮೇಲೆ ಕೆಂಪಾದ ಸಹಿ ಮೂಡಿತು !

—ಮಹೇಶ್ವರ ಹುರುಕಡ್ಲಿ , ಬಾಚಿಗೊಂಡನಹಳ್ಳಿ

